## 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5015/2022 ಫ್ರಾಸಾ-09
ಚಾಸಾ-14

ದಿನಾಂಕಃ 24-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಹನುಮಂತರಾಜು |
| **ತಂದೆಯ / ಗಂಡನ ಹೆಸರು** | ಮುದ್ದಹನುಮಯ್ಯ |
| **ವಯಸ್ಸು** | 36 |
| **ಉದ್ಯೋಗ** | ವ್ಯವಸಾಯ |
| **ವಾಸಸ್ಥಳ** | ತಿಪ್ಪನಹಳ್ಳಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸುಮಾರು 4 ವರ್ಷಗಳ ಹಿಂದೆ ಬಂಡಿಪಾಳ್ಯದ ಹನುಮಂತರಾಯಪ್ಪ ರವರ ಮನೆ ಹಿಂಭಾಗದಲ್ಲಿ ಪೊಲೀಸರು ಬಂದಾಗ ಸಹಿ ಮಾಡಿರುತ್ತೇನೆ. ಆ ದಿನ ಪೊಲೀಸರು ಆರೋಪಿ ಮತ್ತು ರಮೇಶ್ ರವರ ಗಲಾಟೆ ವಿಷಯದಲ್ಲಿ ಬಂದಿದ್ದರು. ಚಾಸಾ-1 ಹಾಜರಿದ್ದು ಇದೇ ಜಾಗದಲ್ಲಿ ಆರೋಪಿ ರಾಮಯ್ಯ ಮೃತ ರಮೇಶನಿಗೆ ಹೊಡೆದ ಜಾಗ ಎಂದು ತೋರಿಸಿರುತ್ತಾನೆ. ಸದರಿ ಜಾಗದಲ್ಲಿ ಪೊಲೀಸರು ಪೊಟೋ ತೆಗೆದಿರುತ್ತಾರೆ ಮತ್ತು ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 9-00 ರಿಂದ 9-45 ಗಂಟೆಯವರೆಗೆ ಮಾಡಿರುತ್ತಾರೆ. ನಿಪಿ-2 ಕ್ಕೆ ನಾನು ಮತ್ತು ಚಾಸಾ-15 ರವರು ಸಹಿ ಹಾಕಿರುತ್ತೇವೆ. ನಿಪಿ-3 ಪೊಟೋವನ್ನು ನೋಡಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ.

**<u>ಪಾಟೀಸವಾಲು ಶ್ರೀ. ವಿ.ಆರ್.ಆರ್. ವಕೀಲರಿಂದ ಆರೋಪಿ ಪರವಾಗಿ:-</u>**

ಪೊಲೀಸರು ಬಂದಾಗ ನಾನು ನಮ್ಮ ಮನೆ ಹತ್ತಿರ ಇದ್ದೆ , ಪೊಲೀಸರು ಬಂದಿರುವುದನ್ನು ನೋಡಿ ನಾನು ಕೃತ್ಯ ನಡೆದ ಸ್ಥಳಕ್ಕೆ ಹೋಗಿರುತ್ತೇನೆ. ಪೊಲೀಸರು ಸ್ಥಳಕ್ಕೆ 9-15 ರಿಂದ 9-30 ಕ್ಕೆ ಬಂದಿರುತ್ತಾರೆ. 3 ಜನ ಪೊಲೀಸರು ಬಂದಿದ್ದು ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಪೊಲೀಸರ ಜೊತೆ ಸರ್ಕಲ್ ಇನ್ಸ್ ಪೆಕ್ಟರ್ ಬಂದಿದ್ದರು ಅವರ ಹೆಸರು ಹನುಮಂತರಾಯಪ್ಪ. ಆ ಸಮಯದಲ್ಲಿ ದಿನೇಶ್ ಹಾಜರಿದ್ದ ಮತ್ತು ಸುಮಾರು 10-15 ಜನ ಹಾಜರಿದ್ದರು, ಅವರ ಹೆಸರು ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಬರೆದ ಪೊಲೀಸರ ಹೆಸರು ನನಗೆ ಗೊತ್ತಿರುವುದಿಲ್ಲ. ಘಟನಾ ಸ್ಥಳದ ಚಕ್ಕುಬಂದಿ ಪೂ-ಹನುಮಂತರಾಯಪ್ಪ ರವರ ಮನೆ ಬಾಗಿಲು, ಪ-ಮನೆಯಿಂದ ಹಿಂದೆಗಡೆ , ಉ-ದಾಸವಾಳ ಹೂವಿನಗಿಡ , ದ-ಇನ್ನೊಂದು ಮನೆ ಇರುತ್ತದೆ.

ನಿಪಿ-2 ಕ್ಕೆ ನಾನು , ರವಿ ಇಬ್ಬರು ಸಹಿ ಮಾಡಿರುತ್ತೇವೆ. ನಾನು ಮತ್ತು ರವಿ ಬಿಟ್ಟು ಸದರಿ ಪಂಚನಾಮೆಗೆ ಬೇರೆ ಯಾರೂ ಸಹಿ ಮಾಡಿರುವುದಿಲ್ಲ. ಆರೋಪಿ ನಮ್ಮ ಊರಿನವರು. ರಾಮಯ್ಯ ರವರ ಅಣ್ಣ ಹೆಸರು ನಾಗರಾಜು ಅವರು ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ನಿಜ. ಸದರಿ ನಾಗರಾಜು ರವರು ಚುನಾವಣೆಯಲ್ಲಿ ಗೆದ್ದಿರುತ್ತಾರೆ ಎಂದರೆ ನಿಜ. ಆ ಸಮಯದಲ್ಲಿ ನಾನು ನಾಗರಾಜು ರವರ ವಿರುದ್ಧ ಕೆಲಸ ಮಾಡಿರುತ್ತೇನೆ ಎಂದರೆ ಸುಳ್ಳು. ನಾನೇ ಅವರಿಗೆ ಮತ ಹಾಕಿರುತ್ತೇನೆ. ನಾನು ನಾಗರಾಜು ರವರ ವಿರುದ್ಧ ಚುನಾವೆಣಯಲ್ಲಿ ಕೆಲಸ ಮಾಡಿ ಸೋತು ಹೋಗಿರುತ್ತೇವೆ. ನಾನು ಆ ದಿನ ಸ್ಥಳದಲ್ಲಿ ಹಾಜರಿಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು 10-15 ನಿಮಿಷದಲ್ಲಿ ಪಂಚನಾಮೆಯನ್ನು ತಯಾರು ಮಾಡಿರುತ್ತಾರೆ. ರಾಮಯ್ಯ ಮತ್ತು ಮೃತ ರಮೇಶ ಸಂಬಂಧದಲ್ಲಿ ಅಣ್ಣ ತಮ್ಮಂದಿರು ಎಂದರೆ ನಿಜ. ರಾಮಯ್ಯ ರಮೇಶನಿಗೆ ಓದಿಸಿ, ತಿಪ್ಪನಹಳ್ಳಿಯಲ್ಲಿ ಮನೆ ಕಟ್ಟಿಸಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಾಸವಾಸದ ಗಿಡ ಹೂ ಬಿಟ್ಟಿತ್ತು, ದಾಸವಾಳದ ಗಿಡ ಹನುಮಂತರಾಯಪ್ಪ ರವರ ಮನೆಯ ಹಿಂಭಾಕ್ಕೆ ಇರುತ್ತದೆ.

ರಮೇಶ ಮತ್ತು ರಾಮಯ್ಯ ಒಂದೇ ಮನೆಯಲ್ಲಿ ಹುಟ್ಟಿ ಬೆಳೆದವರು ಎಂದರೆ ನನಗೆ ಗೊತ್ತಿಲ್ಲ. ನಾನು ನಿಪಿ-2 ಕ್ಕೆ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ , ಬಡವನಹಳ್ಳಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲದೇ ಇದ್ದರೂ ನಾನು ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**